**ಸಿ.ಸಿ.ನಂಃ 201/2024** **ಪಿಡಬ್ಲ್ಯೂಃ 06**

**<u>ದಿನಾಂಕಃ 10.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ–</u>**

ಸಾಕ್ಷಿಯು ಮುಂದುವರೆದು ನ್ಯಾಯಾಲಯಕ್ಕೆ ಚಾಸಾ–2 ರವರ ಎಕ್ಸರೆಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ8 ಎಂದು ಗುರುತಿಸಲಾಯಿತು. ನಿಪಿ4 ರ ಗಾಯಗಳು ಒಬ್ಬ ವ್ಯಕ್ತಿಗೆ ಬಾಡ್ಲಿಯಿಂದ ಹಲ್ಲೆ ಮಾಡಿದರೆ ಸಂಭವಿಸಬಹುದು.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ**

ನಿಪಿ8 ನ್ನು ನಮ್ಮ ಆಸ್ಪತ್ರೆಯಲ್ಲೆ ತಯಾರಾಗಿದೆ. ನಿಪಿ8 ರ ಮೇಲೆ ನಾನು ವರಧಿ ನೀಡಿಲ್ಲ ಎಂದರೆ ಸರಿ. ಒಬ್ಬ ವ್ಯಕ್ತಿ ಎತ್ತರದ ಪ್ರದೇಶದಿಂದ ಬಿದ್ದು, ಬಲವಾಗಿ ಪೆಟ್ಟು ಬಿದ್ದಾಗ ನಿಪಿ4 ರ ಗಾಯಗಳು ಆಗುತ್ತವೆ ಎಂದರೆ ಸರಿಯಲ್ಲ. ನನ್ನ ನೀಡಿರುವ ವರದಿಯಲ್ಲಿ ತೀವ್ರ ಸ್ವರೂಪದ ಗಾಯಗಳು ಎಂದು ನಮೂದು ಆಗಿಲ್ಲ ಎಂದರೆ ಸರಿಯಲ್ಲ. ಚಾಸಾ–2 ರವರು ಎಷ್ಟು ದಿನಗಳ ಕಾಲ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿದ್ದರು ಎಂದು ಹೇಳಲಾಗುವುದಿಲ್ಲ. ನಿಪಿ4 ನ್ನು ಹೊರತುಪಡಿಸಿ ಗಾಯದ ಸ್ವರೂಪಗಳನ್ನು ತಿಳಿಸಲು ಬೇರೆ ವರದಿಯನ್ನು ಸಲ್ಲಿಸಿಲ್ಲ. ನಿಪಿ4 ಮತ್ತು ನಿಪಿ8 ಚಾಸಾ–2 ರವರಿಗೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ನಿಪಿ4 ರ ಗಾಯಗಳು ಹಲ್ಲೆ ಮಾಡಿದರೆ ಮಾತ್ರ ಆಗುತ್ತವೆ ಹೊರತು ಸುಮ್ಮನೆ ಆಗುವುದಿಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತ ಲೇಖನ ಕೊಟ್ಟು ಓದಿ ನೋಡಿ ಸರಿಪಡಿಸಿ ನಂತರ ಸಹಿ ಮಾಡಲಾಯಿತು)

**ಓ ಹೇ ಕೇ ಸ ಇ ಎ ಒ**

**(ಗಿರೀಶ ಆರ್.ಬಿ)**

**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ**

**ಗುಂಡ್ಲುಪೇಟೆ**